195

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು:—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.	
ಅಕ್ಕಿ	ರೂಪಾಯಿ ।ಕ್ಕೆ	7	6 ರಿಂದ 6¾ರ ವರಿಗೆ	ಸೇರುಗಳು.
ರಾಗಿ	,, ...	18¾	14 ರಿಂದ 15ರ ವರಿಗೆ	ಸೇರುಗಳು.

ವ್ಯವಸಾಯ ಕೆಲಸ—ರಾಗಿ ಪೈರುಗಳ ಕಳೀಕೀಳುವದು.

ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳ ಅಭಿವೃದ್ಧಿ—ಸಾಲು ಹೊಡಿಯುವದು ಮುಗಿದು ಇದೆ. ಕಳೀಕೀಳುವದು ಪುರೂ ಆಗಿ ಇದೆ.

ನಿಂತಿರುವ ಪೈರುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರು—ಹೊಸಕೋಟೆ ಕೆರೇಕೆಳಗೆ ವೈಶಾಖಿ ಭತ್ತವು ಕಟಾವಾಗಿದೆ. ಡಿಸ್ಟ್ರಿಕ್ಟಿನಲ್ಲೆಲ್ಲಾ ಮಳೆಯು ಬೇಕಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ ತಾಲ್ಲೂಕಿನಲ್ಲಿ ಬಿದರಹಳ್ಳಿ ಕಸಬಾದಲ್ಲೂ ಮತ್ತು ಆನೆಗೊಂದಹಳ್ಳಿ ಹೋಬಳಿಯಲ್ಲಿಯೂ ಮತ್ತು ದೊಡ್ಡಬಳ್ಳಾಪುರದ ತಾಲ್ಲೂಕು ಮದುಡೆ ಮತ್ತು ಗುಂಡ್ಲಗೂಳಿಪುರ, ಈ ಗ್ರಾಮಗಳಲ್ಲಿಯೂ ಕೆಲವು ಪ್ಲೇಗ್ ಕೇಸುಗಳು, ಮತ್ತು ಕಾರ್ಕಾರಹಳ್ಳಿ ತಾಲ್ಲೂಕು ಬಿಗಹಳ್ಳಿ ಗ್ರಾಮದಲ್ಲಿ ಕೆಲವು ಕಾಲರಾ ಕೇಸುಗಳು, ಇವುಗಳು ಆಗಿವೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕ ಗಳಲ್ಲಿಯೂ ಮತ್ತು ಸಬ್ ತಾಲ್ಲೂಕಿನಲ್ಲಿಯೂ ಬಿತ್ತುತ್ತಿದ್ದಾರೆ.

ನಿಂತಿರುವ ಪೈರುಗಳ ಸ್ಥಿತಿ—ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಮತ್ತು ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿಯೂ ಕುಷ್ಕ ಪೈರುಗಳಿಗೆ ಕಂಬ್ಳೀ ಹುಳಗಳಿಂದ ಕೆಡುಕು ಉಂಟಾಗಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ, ಮುಳಬಾಗಲು, ವಾಲೂರು, ಈ ತಾಲ್ಲೂಕುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಾರ್ತೀಕ ಭತ್ತ. ಚಿಂತಾಮಣಿ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಗುಡಿಬಂಡೆ, ಇವುಗಳಲ್ಲಿ ಹುರುಳಿ. ಕೋಲಾರದಲ್ಲಿ ರಾಗಿ.

ಕುಯ್ಯಲಾದ ಪೈರುಗಳು ಮತ್ತು ಉತ್ಪತ್ತಿಯ ಅಂದಾಜು—ಏನೂ ಇಲ್ಲ.

10. ಕಾಲದ ಆಯತಿಯು ಸುಮಾರಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ

11. ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕೋಲಾರದ ತಾಲ್ಲೂಕಿನ ಷಿಲ್ಲಿಂಗೆರೆ ಮತ್ತು ಕೋಲಾರ ಇವುಗಳಲ್ಲಿಯೂ, ಅಲ್ಲಲ್ಲಿ ಅವ ಕೆಲವು ಪ್ಲೇಗ್ ಮತ್ತು ಕಾಲರಾ ಕೇಸುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉತ್ತು, ಬಿತ್ತುವದು ನಡಿಯುತ್ತಿವೆ.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ಗುಬ್ಬಿ, ಪಾವಗಡ, ಕುಣಿಗಲ್ಲು, ಇವುಗಳಲ್ಲಿ ಭತ್ತ. ತುಮಕೂರು, ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ಪಾವಗಡ ಇವುಗಳಲ್ಲಿ ರಾಗಿ ಮತ್ತು ಹುರುಳಿ. ಗುಬ್ಬಿ ಮತ್ತು ತಿಪಟೂರಿನಲ್ಲಿ ತೊಗರಿ.

ಕುಯ್ಯಲಾದ ಪೈರುಗಳು—ಗುಬ್ಬಿಯಲ್ಲಿಯೂ ಮತ್ತು ತುರುವೇಕೆರೆಯಲ್ಲಿಯೂ ಭತ್ತ. ಗುಬ್ಬಿ, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಕಬ್ಬು. ತಿಪಟೂರಿನಲ್ಲಿ ಎಳ್ಳು. ಪಾವಗಡದಲ್ಲಿ ರಾಗಿ. ತಿಪಟೂರು, ಮತ್ತು ಕೊರಟಗೆರೆಯಲ್ಲಿ ಜೋಳ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಬಿತ್ತಿರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ ಪಾವಗಡ ತಾಲ್ಲೂಕಿನಲ್ಲಿ ವಿರೂಪಸಂದ್ರ, ಗೌಡತಿ, ಈ ಗ್ರಾಮಗಳಲ್ಲಿ ಕಾಲರಾ ಇತ್ತು.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.